ವಸಂತದ ಮಳೆ –
ಬೆಕ್ಕಿಗೆ ನರ್ತನ ಕಲಿಸುತ್ತಿದ್ದಾಳೆ
ಪುಟ್ಟ ಬಾಲೆ

★

ನಕ್ಷತ್ರಗಳ ಗುಟುಕರಿಸುವ
ತಂಪು ನೀರಲ್ಲಿ
ಸ್ವರ್ಗದ ನದಿ

★

ಜೀರುಂಡೆ –
ಅದರ ಕಣ್ಣಲ್ಲಿ ಪ್ರತಿಫಲಿತ
ದೂರಪರ್ವತ

★

ಜೇನುಗೂಡಿನ ಪಕ್ಕ
ಒಂದೆಡೆ ಗುಬ್ಬಚ್ಚಿಗಳು
ಪಡೆದಿವೆ ಬಾಡಿಗೆಗೆ

★

ಜೋರು ಮಳೆಯ ನಡುವೆ
ನಿಂತಿದ್ದಾನೆ
ಕುರುಡನೊಬ್ಬ

★

ಅದರ ಅರ್ಥದಷ್ಟು
ಮನುಷ್ಯನ ಬೆವರೆ?
ಭತ್ತದ ಗದ್ದೆಯ ಮಂಜುಹನಿ

★

ಪೊರೆಯ ಕಳಚಿದ ಮೇಲೆ
ತಂಪೆನಿಸಿತೆ
ಹಾವೇ?

★



ವಾಗೀಶ ಹೆಗಡೆ

ನನ್ನ ಸೇವಂತಿಗೆ
ಹೊರಳಿಸುತ್ತಿವೆ ಮುಖ
ಅವಳು ಹೋದತ್ತ

★

ಮೂರ್ಖ ಬೆಕ್ಕು
ಕಟ್ಟಿಹಾಕಿದ್ದರೂ ಬಿಕ್ಕಿಬಿಕ್ಕಿ ಅಳುತ್ತಿದೆ
ಪ್ರೀತಿಗಾಗಿ

● ಮೂಲ: ಕೋಬಯಾಷಿ ಇಸ್ಸಾ
ಕನ್ನಡಕ್ಕೆ: ಡಾ. ವೆಂಕಟೇಶ್ ಎಂ. ರಾವ್